# ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾದೀಶರ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ **1282/2022**

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ ಅಬಕಾರಿ ಪೊಲೀಸ್ ಇಲಾಖೆ

// ವಿರುದ್ಧ //

ಆರೋಪಿ ಃ ಲಕ್ಷ್ಮಪ್ಪ ತಂದೆ ಶಂಕರಪ್ಪ,
ವಃ **29** ವರ್ಷ, ಸಾಃ ಜೈ ಗ್ರಾಮ,
ತಾಃ ಗುರುಮಠಕಲ್, ಜಿಃ ಯಾದಗಿರಿ.

## ದೋಷಾರೋಪಣೆ

ನಾನು ಶ್ರೀ. ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 23.11.2021 ರಂದು ಸಂಜೆ 06.30 ಗಂಟೆಗೆ ಅಬಕಾರಿ ಉಪ-ನೀರಿಕ್ಷಕರು ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಗುರುಮಿಠಕಲ್ ತಾಲ್ಲೂಕಿನ ಜೈ ಗ್ರಾಮದ ಆರೋಪಿತರಾದ ನಿಮ್ಮ ಮನೆಯ ಮೇಲೆ ದಾಳಿ ಮಾಡಿದಾಗ ನೀವು ಮನೆಯಲ್ಲಿ ಮಾರಾಟಕ್ಕಾಗಿ ಆಕ್ರಮವಾಗಿ ಓರಿಜಿನಲ್ ಚಾಯ್ಸ್ ವಿಸ್ಕಿ 90 ಎಂ.ಎಲ್. ನ 96 ಟೆಟ್ರಾಪಾಕೆಟಗಳು, ತೆಲಂಗಾಣ ರಾಜ್ಯದ ಐ.ಬಿ. ವಿಸ್ಕಿ 375 ಎಂ.ಎಲ್.ನ 08 ಬಾಟಲಿಗಳು, ತೆಲಂಗಾಣ ರಾಜ್ಯದ ಎಂ.ಸಿ ವಿಸ್ಕಿ 375 ಎಂ.ಎಲ್.ನ 08 ಬಾಟಲಿಗಳು ಮತ್ತು ಕಿಂಗ್ ಫಿಷರ್ ಸ್ಟ್ರಾಂಗ್ 650 ಎಂ.ಎಲ್.ನ 12 ಬಾಟಲಿಗಳನ್ನು ಸಂಗ್ರಹಸಿಟ್ಟಿದ್ದು ಕಂಡುಬಂದಿದ್ದು, ಈ ಮೂಲಕ ಆರೋಪಿತನಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?

ಉತ್ತರಃ

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರಃ

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ದಿನಾಂಕಃ 19.08.2024 ರಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 19.08.2024

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.